SRI M. VEERAPPA MOILY.—If 77 Tonnes, which we mentioned, which we are negotiating, that is being sold to Nav Bharath ಬಾಕಿಯಾದು another outside Company has purchased.

ಶ್ರೀ ಎಚ್.ಎಲ್. ತಿಮ್ಮೇಗೌಡ.–ಮಾನ್ಯಮಂತ್ರಿಯವರು ಇನ್ನು ೧೫-೨೦ದಿವಸದಲ್ಲಿ ಮಾತನಾಡುತ್ತೇವೆಂದು ಹೇಳಿದರು. ಮೈಸೂರು ಟೊಬ್ಯಾಕೋ ಕಂಪನಿ ಮಾರ್ಕೆಟ್‌ಗೆ ಎಂಟ್ರಿ ಆಗುತ್ತದೆಂದು ಹೇಳಿದರು ಅದಕ್ಕೆ ಬಗ್ಗು ಹಾಕುವುದು ನಿಧಾನವಾಗುತ್ತದೆ. ಇದನ್ನು ವಿಚಾರ ಮಾಡುವುದಾದರೆ ಮಾಡಲಿ.

ಶ್ರೀ ಎಂ. ವೀರಪ್ಪಮೊಯಿ.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. Mysore Tobacco Company entering the market is subject to the rehabilitation programme that is expected, that is before the Government ಈ ಪ್ರೋಗ್ರಾಂನ್ನು ಯಾವ ರೀತಿ ಸ್ವೀಕಾರ ಮಾಡಬೇಕು. ಯಾವ ರೀತಿಯಲ್ಲಿ ಮಾರ್ಕೆಟ್‌ಗೆ ಎಂಟರ್ ಆಗಬೇಕೆಂಬ ಬಗ್ಗೆ ವಿಚಾರ ವಿನಿಮಯ ಮಾಡಲು ಮಾನ್ಯ ವಿರೋಧಪಕ್ಷದ ನಾಯಕರನ್ನು ಕರೆಸುತ್ತೇನೆ. Then we can announce it. There is no point in insisting for my assurance on the floor of the House. I have said in all words. How can I give a decision ? Then we can take a decision on rehabilitation programme. Let us wait for two or three days.

SRI B. B. SAYANAK.—When Sri Chavan had gone to Nippani to meet the agitators, he was gheraoed by the agitators. So, I request the Government to take action.

re:— Tragic death of Five persons while crossing the Hemavathi river on 19-3-1981 by a country boat. near Ambiganahally Village in Arkalgud Taluk

SRI K B. MALLAPPA.— I call the attention of the Chief Minister to the tragic death of five persons while crossing the Hemavathi river on 19-3-1981 by a country boat near Ambiganahally Village in Arkalgud Taluk.

SRI M. VEERAPPA MOILY [(Minister for Finance on behalf of the Chief Minister)].— Itis reported that on 18-3-1981 at about 8-00 P.M. news was received at Arkalgud Police Station that a ferry boat carrying 16 members of a marriage party sank in Hemavathy river near Ambiganahally Village in Arkalgud Taluk. The Police Sub-Inspector, Arakalgud proceeded to the spot of the tragedy with the available staff and reached there at about 9-30 P.M. at the spot of the tragedy he found two dead bodies and also the ferry boat near the banks. He made a thorough search for the bodies and for the survivors upto 3 miles downstream. In the meantime, the Sub-Divisional Police Officer, Arasikere also visited the spot and guided the search for the bodies. As it was night he stopped further search and posted three Police constables at the spot of the tragedy to watch over the dead bodies. He then proceeded to Ambiganahally and conducted further enquiries. "It is reported that the bridegroom one Puttaraju who survived the accident was secured and his state-

ment was recorded. It is learnt from his statement that, when the ferry boat was nearing Ambiganahally water suddenly rushed into the boat and that the boat sank along with all the inmates." Ten persons including the boatman survived and Five persons died in the incident.

A case was registered under Sections 280 and 304-A I.P.C. On the morning of 19-3-1981 the search was resumed under the supervision of the Superintendent of Police. Three more bodies were traced bringing total number of bodies to five. Inquest proceedings under section 174 Cr. P.C. were conducted over the dead bodies. The Medical Officer General Hospital, Arakalgud was summoned to the spot and post mortem examination was conducted. Of the five dead three were women including the bride and two were men. It is learnt that five persons of Ambiganahally were jointly owning and managing the ferry boat and that they are all absconding. Intensive efforts are being made to secure them. The case is under further investigation,

† ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಇದೇ ತಾರೀಖು ೧೮-೩-೧೯೮೧ರಂದು ಬೆಳಿಗ್ಗೆ ಈ ಮದುಮೆ ಪಾರ್ಟಿಯವರು ಕಂಟ್ರಿ ಬೋಟ್ ಅಂದರೆ ಹರಿಗೋಲು ದೋಣಿಯಲ್ಲಿ ಅದೇ ಮಾರ್ಗದಲ್ಲಿ ಹೋಗಿದ್ದಾರೆ. ಅಂಬಿಗನಹಳ್ಳಿಯ ಹತ್ತಿರ ಈ ನದಿಯನ್ನು ಹರಿಗೋಲನ್ನು ಹಾಕಿಕೊಂಡು ಹಾಯ್ದಾಡದಲ್ಲಿ ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಜನಗಳು ಹೋಗಬೇಕಾಗುತ್ತದೆ. ಈ ರೀತಿ ಹಾಯ್ದುಕೊಂಡು ಹರಿಗೋಲಿನಲ್ಲಿ ಹೋಗಿದ್ದಾರೆ, ಆಷ್ಟು ಹೊತ್ತಿಗೆ ಹೇಮಾವತಿ ಪ್ರಾಜೆಕ್ಟಿನಿಂದ ನೀರನ್ನು ಬಿಟ್ಟಿದ್ದಾರೆ. ಆ ನೀರು ಬಹಳ ಹೆಚ್ಚಿನ ಪ್ರಮಾಣದಲ್ಲಿ ಬಂದಿದೆ, ಇದು ಮದುವೆ ಪಾರ್ಟಿಗೆ ಗೊತ್ತಾಗಲಿಲ್ಲ. ಇದು ವಾಸ್ತವಾಂಶ. "It is reported that the bridegroom one Sri Puttaraju who survived the accident secured and his statement was recorded. It is leart from his statement that, when the ferry boat was nearing Ambiganahally water suddenly rushed into the boat and that the boat sank along with all the inmates',. ತಕ್ಷಣ ದೋಣಿ ನೀರಿನಲ್ಲಿ ಮುಳುಗಿತು. ಈ ರೀತಿ ದೋಣಿ ನೀರಿನಲ್ಲಿ ಮುಳುಗಿದ್ದರಿಂದ ಐದು ಜನರು ಸತ್ತಿದ್ದಾರೆ. ಅವರಲ್ಲಿ ಇಬ್ಬರು ಹೆಂಗಸರು, ಇಬ್ಬರು ವಾದ್ಯ ಊದತಕ್ಕಂಥವರು, ಒಂದು ಮದುಮೆ ಹುಡುಗಿ ಮತ್ತು ಒಬ್ಬ ಮದುಮೇ ಹುಡುಗ. ಇಷ್ಟು ಜನ ಸತ್ತಿದ್ದಾರೆ. ಈ ವಾದ್ಯ ಊದತಕ್ಕಂಥವರು ಮದುಮೆಗಳಲ್ಲಿ ವಾದ್ಯ ಊದಿ ಜೀವನ ನಡೆಸುತ್ತಿದ್ದರು. ಇವರಿಬ್ಬರಿಗೂ ವಂಶೂರು ನಾಲ್ಕು ವರ್ಷದ ಚಿಕ್ಕ ವಯಸ್ಸಿನ ಮಕ್ಕಳಿದ್ದಾರೆ. ಅವರ ಜೀವನೋಪಾಯಕ್ಕೆ ಏನೇನು ಇಲ್ಲ. ಭೂಮಿ ಇಲ್ಲ, ಮತ್ತೊಂದು ಕೆಲಸವಿಲ್ಲ. ವಾದ್ಯ ಊದಿಕೊಂಡು ಜೀವನೋಪಾಯ ಮಾಡಿಕೊಂಡಿದ್ದರು. ಮತ್ತೆ ಈ ಮದುವೆ ಹುಡುಗನಿಗೆ ಒಂದು ಎಕರೆ ಒಂದೂವರೆ ಎಕರೆ ಜಮೀನು ಇರಬಹುದು. ಅದನ್ನು ಕೂಡ ಆತ ಬ್ಯಾಂಕ್ ಆಧಾರಮಾಡಿ ಮದುವೆ ಮಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡಿಕೊಂಡಿದ್ದನು. ಈ ದುರಂತಕ್ಕೆ ಸಿಕ್ಕಿದ ಆ ಇಬ್ಬರು ಹೆಂಗಸರು ಕೂಡ ಬಹಳ ಬಡತನದಲ್ಲಿ ಇದ್ದಂತಹವರು. ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದರು. ಆದ್ದರಿಂದ ಈ ದುರಂತದಲ್ಲಿ ಮಡಿದವರ ಕುಟುಂಬದವರಿಗೆ ಆರ್ಥಮಂತ್ರಿಗಳು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಒಂದು ಶಾಶ್ವತವಾದ ನೆರವು ಆಗುವ ರೀತಿಯಲ್ಲಿ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ದುರಂತ ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿಯೇ ನಡೆದಿರತಕ್ಕಂಥದ್ದಾಗಿರುತ್ತದೆ. ಇದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಸರ್ಕಾರದವರು ತ್ವರಿತವಾಗಿ ಸಹಾಯ ಮಾಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪರಿಹಾರದ ವಿಚಾರದಲ್ಲಿ ಹೇಳಿದ್ದಾರೆ ಮತ್ತು ಈ ದುರಂತವು ಬಹಳ ದುಃಖಕರವಾದ ವಿಚಾರವು ಆಗಿರುತ್ತದೆ. ಅದರಲ್ಲೂ ಒಂದು ಮದುವೆ ದಿಬ್ಬಣಕ್ಕೆ ಹೋಗತಕ್ಕಂಥ ಸಂದರ್ಭದಲ್ಲಿ ಈ ರೀತಿಯಾದ ದುರಂತಕ್ಕೆ ಈಡಾದುದಕ್ಕೆ ಸರ್ಕಾರವು ಕೂಡ ಬಹಳ ಮಟ್ಟಿನ ವಿಷಾದವನ್ನು ವ್ಯಕ್ತಪಡಿಸುತ್ತದೆ. ಪರಿಹಾರ ಕೊಡುವ ವಿಚಾರದಲ್ಲಿ ಜಿಲ್ಲಾಧಿಕಾರಿಗಳಿಂದ ಪ್ರಪೋಸಲ್ ಕೇಳಿದ್ದೇವೆ. ಇಷ್ಟು ಪರಿಹಾರ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಂದ ಪ್ರಪೋಸಲ್ ಬಂದ ಕೂಡಲೇ ನಾವು ಅವರಿಗೆ ಸರಿಯಾದ ರೀತಿಯಲ್ಲಿ ಪರಿಹಾರವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಒಂದು ಸಮಸ್ಯೆ ಏನು ಎಂದರೆ ಡ್ಯಾಮ್‌ನಿಂದ ನೀರನ್ನು ಬಿಡುವಾಗ, ಕವರಿಂಗ್ ಸ್ಲೂಯಿಸ್‌ನಿಂದ ನೀರನ್ನು ಬಿಡುವಾಗ ಕೆಳಭಾಗದಲ್ಲಿ ಇರತಕ್ಕಂಥ ಜನರಿಗೆ, ಮುಳುಗಡೆಯಾಗತಕ್ಕಂಥ ಪ್ರದೇಶದ ಜನರಿಗೆ ಮುನ್‌ಸೂಚನೆ ಕೊಡದೆ ನೀರನ್ನು ಬಿಟ್ಟಿದ್ದೇ ಇಂಥ ಒಂದು ಅನಾಹುತಕ್ಕೆ ಕಾರಣವಾಗಿರುತ್ತದೆ. ಅವರ ಮೇಲೆ ಯಾವ ವಿಧವಾದ ಹತೋಟಿಯೇ ಇರುವುದಿಲ್ಲ. ಮತ್ತು ಈ ದೋಣಿಗಳನ್ನು ನಡೆಸತಕ್ಕಂಥವರು ಚರ್ಮದ ಮತ್ತು ಬಿದಿರಿನ ದೋಣಿಗಳನ್ನು ನಡೆಸುತ್ತಿರುತ್ತಾರೆ. ಇವುಗಳು ಹಳೆಯದಾಗಿದ್ದರೂ ಅದಕ್ಕೆ ತೇಪೆಯನ್ನು ಹಾಕಿಕೊಂಡು ಒಂದೆರಡು ತಿಂಗಳ ಮಟ್ಟಿಗೆ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ, ಅವರುಗಳ ಮೇಲೂ ಸಹ ಸರ್ಕಾರ ಸ್ವಲ್ಪ ಮಟ್ಟಿನ ಹತೋಟಿಯನ್ನು ಇಟ್ಟುಕೊಳ್ಳಬೇಕು. ಸ್ಥಳೀಯ ಅಧಿಕಾರಿಗಳು ಈ ಜನರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳದಿದ್ದರೆ ಇಂಥ ಅನಾಹುತವಾಗುವುದನ್ನು ತಪ್ಪಿಸಲಿಕ್ಕೆ ಸಾಧ್ಯವೇ ಆಗುವುದಿಲ್ಲ.

ಎರಡನೆಯದಾಗಿ ಪರಿಹಾರ ಕೊಡುವ ವಿಷಯದಲ್ಲಿ ಹೇಳುವುದಾದರೆ ಕನಿಷ್ಟಪಕ್ಷ ಇವರುಗಳ ಕುಟುಂಬದವರಿಗೆ ೫ ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು. ಐದು ಜನರು ಈ ದುರಂತದಲ್ಲಿ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಮುಖ್ಯ ಮಂತ್ರಿಗಳು ರಿಪೋರ್ಟನ್ನು ಕೂಡ ತರಿಸಿಕೊಂಡಿರುತ್ತಾರೆ. ಐದುಜನರು ಸತ್ತಿರುವುದನ್ನು ತಾವು ಒಪ್ಪಿಕೊಂಡಮೇಲೆ ಸರ್ಕಾರದವರು ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣವನ್ನು ಕೊಡಲಿಕ್ಕೆ ವಿತಕ್ಕೆ ವಿಳಂಬ ಮಾಡಬೇಕೆಂದು ಕೇಳುತ್ತೇನೆ. ಡಿ. ಸಿ.ಯವರ ರಿಪೋರ್ಟನ್ನೂ ಕೂಡ ತರಿಸಿಕೊಂಡಿರುತ್ತೀರಿ, ಆದ್ದರಿಂದ ಈ ದುರಂತದಲ್ಲಿ ಪ್ರಾಣದವರ ಕುಟುಂಬದವರಿಗೆ ೫ ಸಾವಿರ ರೂಪಾಯಿಗಳನ್ನು ಕೊಡತಕ್ಕಂಥ ಒಂದು ಆಶ್ವಾಸನೆಯನ್ನು ದಯವಿಟ್ಟು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ನೀರು ಬಿಟ್ಟ ವಿಚಾರ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದ ಕೂಡಲೇ ಇಂಥ ಅನಾಹುತ ಆಗುವ ಕಡೆಗಳಲ್ಲಿ ಮುನ್‌ಸೂಚನೆ ಇಲ್ಲದೆ ನೀರನ್ನು ಬಿಡಬಾರದೆಂದು, ನೀರನ್ನು ಬಿಡುವಾಗ ಎಲ್ಲ ವಿಧವಾದ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ಪ್ರತ್ಯೇಕವಾಗಿ ಒಂದು ಸುತ್ತೋಲೆಯನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟಿರುತ್ತೇವೆ. ಮಾನ್ಯ ಸದಸ್ಯರಾದ ದೇವೇಗೌಡರು ನಾಡ ದೋಣಿಗಳ ಬಗ್ಗೆ ಹೇಳಿದ ಪ್ರಕಾರವಾಗಿ ನಾಡ ದೋಣಿಗಳನ್ನು ಚಾಲನೆ ಮಾಡುವಾಗ, ಇದನ್ನು ಚಾಲನೆ ಮಾಡತಕ್ಕಂಥವರು ಎಲ್ಲ ವಿಧವಾದ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ತಿಳಿಸಿರುತ್ತೇವೆ, ಹಳೆಯ ಮತ್ತು ತೇಪೆಯನ್ನು ಹಾಕಿರತಕ್ಕಂಥ ನಾಡದೋಣಿಗಳನ್ನು ನಡೆಸಿ ಸಾರ್ವಜನಿಕರಿಗೆ ಅಪಾಯ ತರತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಬಾರದೆಂದೂ, ಮುಂಜಾಗ್ರತೆಯ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆಂದು ತಿಳಿಸುತ್ತೇನೆ.

ಇನ್ನು ಪರಿಹಾರದ ವಿಚಾರವಾಗಿ ಮಾನ್ಯ ಸದಸ್ಯರು ಹೇಳಿದ ಪ್ರಕಾರವಾಗಿ ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ಪ್ರೊಪೋಸಲ್ ಕೇಳಿದ್ದೇವೆ. ಐದು ಸಾವಿರ ರೂಪಾಯಿಗಳ ಪರಿಹಾರವನ್ನು ಈ ಕ್ಷಣ ಮಂಜೂರು ಮಾಡಬೇಕೆಂದು ಏನು ಹೇಳುತ್ತಾರೆ ಅದನ್ನು ಕೂಡ ನಾವು ಗಮನಿಸುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು.—ಸಾರ್ವಜನಿಕ ಮಹತ್ವದ ಅತಿ ಜರೂರಿನ ಗಮನ ಸೆಳೆಯುವ ಸೂಚನೆ ಶ್ರೀಯುತ ಎಂ.ಎಸ್. ಆತ್ಮಾನಂದ ಹಾಗೂ ಎಚ್.ಡಿ. ಚೌಡಯ್ಯನವರು.